ಮಯೂರ ವಿಶೇಷ

# ಕುವೆಂಪು ಅಂದಿಗೂ ಇಂದಿಗೂ ಎಂದೆಂದಿಗೂ...




**ಬರಗೂರು ರಾಮಚಂದ್ರಪ್ಪ**


ಸಮಾನತೆ, ಸೌಹಾರ್ದತೆ, ಬಹುತ್ವ ಮತ್ತು ಒಕ್ಕೂಟ ಪದ್ಧತಿಗಳ ಪ್ರತಿಪಾದಕರಾಗಿ ಕುವೆಂಪು ಸದಾ ಪ್ರಸ್ತುತ. ಭಾರತದ ಒಕ್ಕೂಟಪ್ರಜ್ಞೆಗೆ ಕನ್ನಡನಾಡು ನೀಡಿದ ಅಪೂರ್ವ ಕೊಡುಗೆ, ಕುವೆಂಪು!

'ಕುವೆಂಪು' ಎಂದರೆ ರಮ್ಯತೆ, ವೈಚಾರಿಕತೆ ಮತ್ತು ಆಧ್ಯಾತ್ಮಿಕತೆಯಂತಹ ವೈರುಧ್ಯಗಳನ್ನು ಒಂದಾಗಿಸಿದ ವಿಶಿಷ್ಟ ವಿಚಾರಧಾರೆಯನ್ನು ಕಟ್ಟಿಕೊಟ್ಟ ದಾರ್ಶನಿಕ ಪ್ರಭೆ. ಪರಂಪರೆಯ ಪ್ರಜ್ಞೆ ಮತ್ತು ಸಮಕಾಲೀನ ಪ್ರಜ್ಞೆಗಳ ನಡುವೆ ಅನುಸಂಧಾನಿಸಿ ವಾಸ್ತವಿಕ ಪ್ರಜ್ಞೆಯನ್ನು ಬೆಳೆಸಿದ್ದು ಕುವೆಂಪು ಪ್ರತಿಭೆ. ಅವರು ಇಂದಿಗೂ ಪ್ರಸ್ತುತವಾಗಿದ್ದಾರೆ. ನಮ್ಮೊಳಗೆ ಬದುಕಿದ್ದಾರೆ. ಆದ್ದರಿಂದ ಕುವೆಂಪು ವಿಚಾರಧಾರೆಯ ಪ್ರಸ್ತುತತೆಯನ್ನು ಕುರಿತು ಒಂದಷ್ಟು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಮೊದಲಿಗೆ, ಈಗ ಪ್ರಸ್ತುತ ಸನ್ನಿವೇಶದ ಸಮಸ್ಯೆ, ಸವಾಲುಗಳನ್ನು ಗಮನಿಸೋಣ. ಧಾರ್ಮಿಕ ಮೂಲಭೂತವಾದ, ಜಾತಿವಾದ, ಬಹುತ್ವ ಮತ್ತು ಒಕ್ಕೂಟ ಪದ್ಧತಿಗೆ ಧಕ್ಕೆ, ಸಮಾನತೆ ಮತ್ತು ಸೌಹಾರ್ದತೆಗಳ ಹಿನ್ನಡೆ-ಇವು ಇಂದಿನ ಸನ್ನಿವೇಶದ ಮುಖ್ಯ ಸಮಸ್ಯೆ ಮತ್ತು ಸವಾಲುಗಳಾಗಿವೆ. ಜಾತಿ ಮತ್ತು ಮತಧರ್ಮಗಳ ಧ್ರುವೀಕರಣ ಮತ್ತು ಶ್ರೇಣೀಕರಣ ಒಟ್ಟಿಗೇ ಅಸ್ತಿತ್ವದಲ್ಲಿರುವ ಮತ್ತು ಮತ್ತಷ್ಟು ಹೆಚ್ಚಾಗುತ್ತಿರುವ ಬಿಕ್ಕಟ್ಟು ನಮ್ಮೆದುರಿಗಿದೆ. ಜಾತಿ–ಜಾತಿಗಳ ನಡುವೆ ಮತ್ತು ಧರ್ಮ–ಧರ್ಮಗಳ ನಡುವೆ ಅನಾರೋಗ್ಯಕರ ಅಂತರವೂ ಹೆಚ್ಚಾಗುತ್ತಿದೆ. ಜಾತಿ ಮತ್ತು ಧರ್ಮಗಳ ಹೊರ ಅಂತರವಷ್ಟೇ ಅಲ್ಲ, ಆಯಾ ಜಾತಿ ಮತ್ತು ಧರ್ಮಗಳ ಒಳಗೂ ಶ್ರೇಣೀಕೃತ ಅಂತರಗಳಿವೆ. ಜೊತೆಗೆ ಜಾತಿ ಮತ್ತು ಧರ್ಮಗಳ ಒಳ ವಿಮರ್ಶೆಯನ್ನೂ ಸಹಿಸದೆ ಇರುವ ಮನೋವೃತ್ತಿ ಬೆಳೆಯುತ್ತಿದೆ. ಇಂತಹ ಸನ್ನಿವೇಶಕ್ಕೆ ಎದುರಾಗಬೇಕಾದ ಚಿಂತನೆ ಮತ್ತು ಕಾರ್ಯವಿಧಾನಗಳನ್ನು ಕುವೆಂಪು ಅವರ ವಿಚಾರಧಾರೆಯಲ್ಲಿ ಕಾಣಬಹುದು. ಸಾಮಾಜಿಕ–ಧಾರ್ಮಿಕ ಸಮಸ್ಯೆಗಳನ್ನು ಕುವೆಂಪು ಅವರು ಪರಿಶೀಲಿಸಿದ ಮತ್ತು ಅವಕ್ಕೆ ಎದುರಾದ ರೀತಿ ವಿಶಿಷ್ಟವಾದುದು; ಜಾತಿ ಮತ್ತು ಸಾಂಸ್ಥಿಕ ಧರ್ಮಗಳ ಅಸಮಾನತೆ ಮತ್ತು ಅಸಹನೆಯನ್ನು ಪ್ರತಿರೋಧಿಸುವ